ಚಿರೋಟಿ ಬೇಡವೇ, ಈ ಅಲಂಕೃತ ಕೇಕ್ ಬೇಡವೇ, ಉತ್ತಪ್ಪ, ಪಾವ್ ಬಾಜಿಗಳು ಬೇಡವೇ... 'ಮಯೂರ' ಸಿನಿಮಾದ ತಾಯಿಯಂತೆ ಒಬ್ಬರಾದ ಮೇಲೆ ಒಬ್ಬರು ಆಸೆ ತೋರಿಸಲು ಶುರು ಮಾಡಿದರು. ಏನು ಮಾಡುವುದು? ಏನು ಮಾಡುವುದು ಎಂಬುದು ಬಹಳ ದೊಡ್ಡ ಪ್ರಶ್ನೆ. ನಮ್ಮ ಮುಂದೆ ಅಗಣಿತವಾದ ಆಯ್ಕೆಗಳಿದ್ದಾಗ ಯಾವುದನ್ನು ಹೇಗೆ ಯಾವ ಮಾನದಂಡದಿಂದ ಆಯ್ಕೆ ಮಾಡುವುದು? ಇದನ್ನು 'ಉಲಮ್‌ನ ದ್ವಂದ್ವ'(**Ulam's dielemma**) ಎಂದು ಕರೆಯುತ್ತಾರಂತೆ. ಇದಕ್ಕೆ ಪರಿಹಾರವೇನು? ಮಾನದಂಡಗಳಿದ್ದರೂ ನೀವು ಏನನ್ನೂ ಮಾಡಲಾರಿರಿ ಎಂಬುದು ಉಲಮ್ ಎಂಬ ಅಮೆರಿಕನ್ ಗಣಿತಜ್ಞನ ಉತ್ತರ. 'ನೀವು ಯಾವುದಕ್ಕೂ ನ್ಯಾಯ ಒದಗಿಸಲಾರಿರಿ' ಎಂಬುದನ್ನು ಅವನು ಕಂಡು ಹಿಡಿದ! ಎಲಾ ಇವನ ಇದನ್ನೂ ಕಂಡು ಹಿಡೀತಾರ? ಇಂಥ ಸಿದ್ಧಾಂತಗಳೆಲ್ಲ ಫಾರಿನ್‌ನಿಂದ ಬರುತ್ತವೆ. 'ಕಷ್ಟಪಟ್ಟರೂ ಇಲ್ಲ ಕಳವಳಿಸಿದರೂ ಇಲ್ಲ' ಎಂದು ಕನಕದಾಸರು ಹಾಡಿದ್ದು ಸಿದ್ಧಾಂತವಾಗುವುದಿಲ್ಲವೇ? ಇದನ್ನೂ ದಾಟಿ 'ಬಡವ ನೀ ಮಡಗಿದ ಹಾಗೆ ಇರು' ಎಂದು ಹೇಳಿದ ನಮ್ಮ ಅಜ್ಜ ಅಜ್ಜಿಯರದೂ ಸಿದ್ಧಾಂತವಲ್ಲವೇ ? ಇದನ್ನೆಲ್ಲ ನೋಡಿ ನಮ್ಮ ಹಿರಿಯರು 'ಶಂಖದಿಂದ ಬಿದ್ದರೆ ತೀರ್ಥ' ಎಂದು ಹೇಳಿದ್ದು ಫಾರಿನ್ ಪಠ್ಯದಲ್ಲಿ ಒಂದು ಥಿಯರಿ ಆಗಬಹುದಲ್ಲವೇ? ಅದೇನೇ ಇರಲಿ, ನಾನೀಗ 'ಉಲಮ್ ಸಂದಿಗ್ಧ'ದಲ್ಲಿದ್ದೇನೆ ಮತ್ತು ನನಗೆ ನಾನೂ ನ್ಯಾಯ ಒದಗಿಸಿಕೊಳ್ಳಲಾರೆ. ಆದರೇನು ಪದಗಳು ಅಳಿಯಬಹುದು, ಥಿಯರಿಗಳು ಅಳಿಯಬಹುದು, ಆದರೆ ಪದಾರ್ಥವಳಿಯಲಾರದು. ಆಯ್ತು ಬಿಡಪ್ಪ ಅಲ್ಲಮ, ನೀನೇ ಹೇಳಿದಂತೆ ನೂರು ಪದಾರ್ಥಗಳಿವೆ. ಆದರೆ ನನಗೆ ಇರುವ ಹಸಿವೆ ಮಾತ್ರ ಒಂದೇ. ಅದೂ ಈಗ ಸಂಕೋಚದಿಂದ ಮುದ್ದೆಯಾಗಿದೆ. ಸಮಯ ಬಂದಾಗ ಒಳಗಿನವರೇ, ನಮ್ಮ ನಮ್ಮವರೇ ನಮಗೆ ಕೈಕೊಡುತ್ತಾರಂತೆ. ಹಸಿವೆಯೂ ನನಗೆ ಮೋಸ ಮಾಡಿತು! ನೋಡಿಯೇ ಹೊಟ್ಟೆ ತನ್ನನ್ನು ತುಂಬಿಸಿಕೊಂಡಿದೆ. ಇನ್ನು ಪದೇ ಪದೇ ತಿರುಗಿದರೆ ಯಾರಿಗಾದರೂ ಅನುಮಾನ ಬಂದೀತು. ಇನ್ನು ತಡ ಮಾಡಬಾರದು. ಡೀಸೆನ್ಸಿ ಮುಖ್ಯ. ಹೀಗಾಗಿ ನಾನು ಶುದ್ಧ ಬ್ರಹ್ಮಚಾರಿಯಂತೆ ಯಾವ ಆಕರ್ಷಣೆ ಪ್ರಲೋಭನೆಗಳಿಗೂ ಒಳಗಾಗದೆ ಬಿಟ್ಟ ಬಾಣದ ಹಾಗೆ ಸಾಗಿ ಇಡ್ಲಿ ಟ್ರೇ ಮುಂದೆ ನಿಂತು ಎರಡು ಇಡ್ಲಿ, ಸ್ವಲ್ಪ ಚಟ್ನಿ ಹಾಕಿಕೊಂಡು ಒಂದು ಟೇಬಲ್ ಮುಂದೆ ಕುಳಿತೆ. 'ಪಾಪಿ ಸಮುದ್ರ ಹೊಕ್ಕರೂ ಮೊಣಕಾಲುದ್ದ ನೀರು' ಎಂಬ ಗಾದೆ ಅಂದು ನನಗೆ ಚೆನ್ನಾಗಿ ಅರ್ಥವಾಯಿತು.

ಇದೇ ಸಂದರ್ಭದಲ್ಲಿ ಆ ಹೋಟೆಲಿನ ವೈಭವದ ಬಗ್ಗೆ ಇನ್ನೂ ಕೆಲವು ಮಾತುಗಳನ್ನು ಹೇಳಬೇಕಿದೆ. ಸ್ವಚ್ಛ ಭಾರತದ ಸ್ವಚ್ಛತೆ ಪರೀಕ್ಷಿಸಲು ಆಫೀಸಿಗೆ ಬರುವವರು ಮೊದಲು ಟಾಯ್ಲೆಟ್, ಬಾತ್‌ರೂಂಗಳನ್ನು ಪರಿಶೀಲಿಸುತ್ತಾರೆ. ಅದು ಆಫೀಸಿನ ಪರಿಸ್ಥಿತಿಯ ಕನ್ನಡಿ ಇದ್ದ ಹಾಗೆ ಅಂತೆ. ಹಾಗೆ ನಾನು ಜಾಸ್ತಿ ವೇಳೆಯನ್ನು ತೆಗೆದುಕೊಳ್ಳದೆ ಅದರ ರೆಸ್ಟ್ ರೂಮನ್ನು ಮಾತ್ರ ವರ್ಣಿಸುವೆ. ಇನ್ನು ಉಳಿದುದೆಲ್ಲ ಹೇಗಿರಬಹುದು ಎಂದು ನೀವು ಊಹಿಸಿಕೊಳ್ಳಬಹುದು. ರೂಮು ಪ್ರವೇಶಿಸಿದ ಕೂಡಲೇ ನನಗಿದ್ದ ಮೊದಲ ಕೆಲಸ ಬಾತ್ ರೂಮಿಗೆ ಹೋಗುವುದು. ಬ್ಯಾಗು ಇಟ್ಟವನೇ ಸೀದಾ ಹೋದೆ. ಛೇ... ಇದು ಹೋಗುವುದಲ್ಲ. ಸಾವಧಾನವಾಗಿ ಬಿಜಯಂಗೈಯುವ ತಾಣವದು. ಒಳ್ಳೇ ಅಲಂಕೃತ ವಿಶ್ರಾಂತಿ ಕೊಠಡಿಯಂತಿದೆ. ಗೊಂಚಲು ಗೊಂಚಲು ಬಲ್ಬುಗಳಿಂದ ಬೆಳಕಿನ ವಿನ್ಯಾಸ. ಗೋಡೆಯಲ್ಲಿ ಚಿತ್ರಕಲೆಯ ಸಾಲು. ನೆಲವೆನ್ನುವುದು ಕನ್ನಡಿಯಂತೆ ಹೊಳೆಯುತ್ತಿದೆ. ದುರ್ಯೋಧನನಂತೆ ತಪ್ಪಿ